"ಅಷ್ಟು ದೂರ ಐತೇನ್ರಿ?"

"ಹೌದು."

ಇದಾದ ಸ್ವಲ್ಪ ಹೊತ್ತಿನ ನಂತರ ಒಂದು ಬಲುದೊಡ್ಡ ಶಹರವನ್ನು ಕಾರುಗಳು ಪ್ರವೇಶಿಸಿದವು. ಫಕೀರನಿಗೆ ತಾನು ಯಾವುದೋ ಕನಸಿನಲ್ಲಿ ಸಾಗುತ್ತಿರುವಂತೆ ಭಾಸವಾಗತೊಡಗಿತ್ತು!

ಕಾರುಗಳು ಒಂದು ದೊಡ್ಡ ಕಟ್ಟಡದ ಒಳಗೆ ಪ್ರವೇಶಿಸಿ ನಿಂತವು. ಎಲ್ಲ ಕಡೆ ಮೆಟ್ಟಿಲುಗಳು, ಒಂದಾದ ನಂತರ ಒಂದು ಮಹಡಿಯಲ್ಲಿದ್ದ ಖೋಲಿಗಳು ಮತ್ತು ಅನೇಕ ಕಾರುಗಳು. ಎಲ್ಲಾ ಇಳಿದರು. ಫಕೀರ ಹೆದರಿ ತನ್ನ ಗಂಟನ್ನು ಅವುಚಿಕೊಂಡು ಒಳಗೇ ಕುಳಿತಿದ್ದ.

"ಗಂಟು ಅಲ್ಲೇ ಕಾರಿನಾಗ ಇಟ್ಟು ಇಳಿಯಪಾ" ಎಂದ ಒಬ್ಬ. ಫಕೀರ ತನ್ನ ಕೈಗಂಟನ್ನು ಅಲ್ಲೇ ಸೀಟಿನಲ್ಲಿ ಇಟ್ಟು ಇಳಿದ. ಅದೊಂದು ದೊಡ್ಡ ಲಾಜಿಂಗ್ ಮತ್ತು ರೆಸ್ಟೊರೆಂಟ್. ರೆಸ್ಟೊರೆಂಟ್ ಪ್ರವೇಶಿಸಿದೊಡನೆ ಅಲ್ಲಿದ್ದ ಜನರ ಗದ್ದಲವನ್ನು ಕಂಡು ಫಕೀರ ಗಾಬರಿಯಾದ. ತನ್ನ ಹಳ್ಳಿಯ ಮದುವೆಗಳಲ್ಲಿ ಕೂಡ ಅಷ್ಟೊಂದು ಜನರನ್ನು ಕಂಡಿರಲಿಲ್ಲ. ಟೇಬಲ್ ಎದುರಿದ್ದ ಕುರ್ಚಿಗಳಲ್ಲಿ ಅವರು ಕುಳಿತರು. ಫಕೀರನಿಗೆ ಏನು ಮಾಡಬೇಕೆಂದು ತೋಚದೆ ಟೆಬಲ್ ಪಕ್ಕದಲ್ಲೇ ನಿಂತುಕೊಂಡ.

"ಕುಂದರಪಾ" ಎಂದು ಒಬ್ಬ ಕೈ ಜಗ್ಗಿ ಕುಳ್ಳಿರಿಸಿದ.

ನೀರು ತಂದಿಟ್ಟರು. ಬಾಯಾರಿಕೆ ಆದದ್ದರಿಂದ ಫಕೀರ ನೀರು ಕುಡಿದ.

"ಏನು ತಿಂತಿಯಪಾ?" ಒಬ್ಬ ಕೇಳಿದ.

"ನೀವು ಏನು ತಿಂತಿರಿ ಅಂದರಾಗ ಸ್ವಲ್ಪ ಕೊಡ್ರಿ."

ಮೂವರೂ ನಕ್ಕರು.

"ದೋಸೆ ತಿಂತಿಯಾ?"

"ಬ್ಯಾಡ್ರಿ. ನನಗ ಒಂದು ಮಿರ್ಚಿಭಜಿ ಮತ್ತ ಚಾ ಕೊಡಸ್ರಿ."

"ಅದು ಇಲ್ಲೆ ಸಿಗಲಿಕ್ಕಿಲ್ಲ."

ಒಬ್ಬ ಸರ್ವರನ್ನು ಕೂಗಿ ಕರೆದ. ಅವನು "ಬಾಳೆಕಾಯಿ ಬಜ್ಜಿ ಇದೆ" ಎಂದ. "ಇವರಿಗೊಂದು ಪ್ಲೇಟು ಅದ ಬಜ್ಜಿ ಕೊಡಪಾ. ನಮಗಾ ಮಸಾಲ ದೋಸೆ ಕೊಡು" ಹೇಳಿದ.

ತಿಂದು ಚಹಾ ಕುಡಿದ ಮೇಲೆ ಕಾರುಗಳು ಶಹರವನ್ನು ಪ್ರವೇಶಿಸಿದವು. ಎಲ್ಲಿ ನೋಡಿದತ್ತ ಅಂಗಡಿಗಳು. ಸಂಜೆಯಾಗ ತೊಡಗಿದ್ದರಿಂದ ಅಲ್ಲಲ್ಲಿ ವಿವಿಧ ನಮೂನೆಯ ದೀಪಗಳು ಹೊತ್ತಿಕೊಂಡಿದ್ದವು. ಅವರೆಲ್ಲ ಒಂದು ದೊಡ್ಡ ಬಟ್ಟೆ ಅಂಗಡಿ ಪ್ರವೇಶಿಸಿದರು.

"ಒಂದು ಜೊತೆ ಮಲ್ ಧೋತರ ಮತ್ತ ಇವರ ಸೈಜಿನ ಅಂಗಿ ತೋರಸಪಾ" ಎಂದ ಒಬ್ಬ.

"ಧೋತರದೊಳಗ ಚಡ್ಡಿ ಹಾಕ್ಕೊಂತಿಯೇನಪಾ?" ಒಬ್ಬ ನಗುತ್ತ ಕೇಳಿದ.

"ಇಲ್ಲ ಬಿಡ್ರಿ" ಎಂದ ಫಕೀರ.

ಧೋತರಗಳು, ಅಂಗಿಗಳು ಬಂದವು. ಹಾಗೆ ಹೊಸ ಟವಲ್‌ಗಳು ಬಂದವು. ಕರಿ ಟೊಪಗಿ ಮತ್ತು ಒಂದು ಕೋಟು ಬಂದಿತು. ಫಕೀರನ ಸೈಜಿನ ಒಂದು ಜೀನ್ಸ್ ಪ್ಯಾಂಟು ಮತ್ತು ಟೀ ಶರ್ಟ್‌ಗಳು ಬಂದವು.

"ಇವರನ್ನು ಚೇಂಜಿಂಗ್ ರೂಮಿಗೆ ಕರಕೊಂಡು ಹೋಗಿ ಸ್ವಲ್ಪ ಸೈಜ್ ಚೆಕ್ ಮಾಡ್ರಿ" ಎಂದು ಒಬ್ಬ ಹೇಳಿದ. ಎಂದೆಂದೂ ಧೋತರದೊಳಗೆ ಚಡ್ಡಿ ಹಾಕದಿದ್ದ ಫಕೀರನಿಗೆ ಚಡ್ಡಿ ಹಾಕಿದೊಡನೆ ಮುಜುಗರವಾಗತೊಡಗಿತು. ಆದರೂ ಅದರ ಮೇಲೆ ಶರಟು, ಕೋಟು, ಟೋಪಿ ಧರಿಸಿ ತನ್ನನ್ನೇ ಕನ್ನಡಿಯಲ್ಲಿ ನೋಡಿಕೊಂಡಾಗ ತಾನು ಬೇರೆ ಯಾರನ್ನೋ ನೋಡುತ್ತಿರುವಂತೆ ಬೆದರಿದ! ಕುರಚಲು ಗಡ್ಡ, ಕೆದರಿದ ಕೂದಲು, ಎಲೆ ಅಡಕೆಯಿಂದ ಕೆಂಪಾದ ಬಾಯಿ ಇವುಗಳ ಮೇಲೆ ಹೊಸ ಧೋತರ,